

# ಡಾನ್ಸಿಂಗ್ ಹೌಸ್!

ಜೆಕ್ ಗಣರಾಜ್ಯದ 'ಪ್ರಾಗ್' ನಗರವನ್ನು ಸಂದರ್ಶಿಸಿದ ಪ್ರವಾಸಿಗರು ಡೌನ್ ಟೌನ್‌ನಲ್ಲಿರುವ ಕಟ್ಟಡ 'ಡಾನ್ಸಿಂಗ್ ಹೌಸ್' ಅನ್ನು ತಪ್ಪದೇ ವೀಕ್ಷಿಸುತ್ತಾರೆ. ಐತಿಹಾಸಿಕ ಹಿನ್ನೆಲೆಯಲ್ಲಿ ನಿರ್ಮಾಣಗೊಂಡಿರುವ ಈ ಕಟ್ಟಡದ ವಿಶಿಷ್ಟ ವಾಸ್ತುಶೈಲಿ ಎಂತಹವರನ್ನೂ ನಿಬ್ಬೆರಗಾಗಿಸುತ್ತದೆ.

ಈ ಕಟ್ಟಡವನ್ನು ನಿರ್ಮಿಸಲಾದ ಸ್ಥಳವು 1945ರಲ್ಲಿ ಅಮೆರಿಕದ ಬಾಂಬ್ ದಾಳಿಯಿಂದ ನಾಶವಾದ ಒಂದು ಮನೆಯ ಸ್ಥಳವಾಗಿತ್ತು. 1992ರಲ್ಲಿ ಅಮೆರಿಕದ ಫ್ರಾಂಕ್ ಗೆಹ್ರಿ ಹಾಗೂ ಜೆಕ್ ವಾಸ್ತುಶಿಲ್ಪಿ ವ್ಲಾಡೋಮಿಲುನಿಚ್ ವಿನ್ಯಾಸಗೊಳಿಸಿ 1996ರಲ್ಲಿ ನಿರ್ಮಾಣ ಕಾರ್ಯ ಪೂರ್ಣಗೊಂಡ ಈ ಅಸಾಂಪ್ರದಾಯಿಕ ಕಟ್ಟಡ ವಿನ್ಯಾಸ ಅಂದಿನ ಕಾಲದಲ್ಲಿ ವಿವಾದಾತ್ಮಕವಾಗಿತ್ತು. ಇಬ್ಬರು ನೃತ್ಯಗಾರರು ನೃತ್ಯ ಮಾಡುತ್ತಿರುವ ಪರಿಕಲ್ಪನೆಯಲ್ಲಿ ಮೂಡಿಬಂದ ಈ ಕಟ್ಟಡ ಪ್ರವಾಸಿಗರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ.

ಪ್ರಸಿದ್ಧ ಡಾನ್ಸರ್‌ಗಳಾದ ಫ್ರೆಡ್ ಆಸ್ಟೈರ್ ಮತ್ತು ಜಿಂಜರ್ ರೋಜರ್ಸ್‌ರನ್ನು ಪ್ರತಿನಿಧಿಸುವ ಡಾನ್ಸಿಂಗ್ ಹೌಸ್ ಅನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಅರ್ಧ ಭಾಗ ಗಾಜಿನ ಗೋಪುರವಾಗಿದ್ದು ಬಾಗಿದ ಕಂಬಗಳ ಆಧಾರದಲ್ಲಿ ನಿಂತಿದೆ ಕಾಂಕ್ರೀಟ್‌ನಿಂದ ನಿರ್ಮಿಸಲಾದ ಗೋಪುರವನ್ನು ಫ್ರೆಡ್ ಪ್ರತಿನಿಧಿಸಿದರೆ, ಗಾಜಿನಿಂದ ಕೂಡಿದ ಗೋಪುರವನ್ನು ಜಿಂಜರ್ ರೋಜಸ್ ಪ್ರತಿನಿಧಿಸುತ್ತಾರೆ.

ಈ ಕಟ್ಟಡವು ಎರಡು ನೆಲ ಅಂತಸ್ತುಗಳನ್ನು ಒಳಗೊಂಡಂತೆ 9 ಅಂತಸ್ತುಗಳನ್ನು ಹೊಂದಿದ್ದು, ಪ್ರತಿ ಮಹಡಿಯ ವಿನ್ಯಾಸವೂ ಅಸಮಪಾರ್ಶ್ವವಾಗಿದೆ. ಮೊದಲ ಮಹಡಿ ವಾಣಿಜ್ಯ ಪ್ರದೇಶ ಹಾಗೂ ಲಾಬಿಯನ್ನು ಹೊಂದಿದೆ. ಮೇಲಿನ ಆರು ಮಹಡಿಗಳಲ್ಲಿ ಕಚೇರಿಗಳಿದ್ದರೆ, ಒಂಬತ್ತನೇ ಅಂತಸ್ತಿನಲ್ಲಿ ರೆಸ್ಟೋರೆಂಟ್ ಇದೆ. ಒಂಭತ್ತನೆ ಮಹಡಿಯವರೆಗೂ ಲಿಫ್ಟ್ ವ್ಯವಸ್ಥೆಯಿದ್ದು, ರೆಸ್ಟೋರೆಂಟ್‌ನಿಂದ 'ಪ್ರಾಗ್' ನಗರದ ಸೌಂದರ್ಯವನ್ನು ಸವಿಯಬಹುದಾಗಿದೆ.

■ ಜಿ. ನಾಗೇಂದ್ರ ಕಾವೂರು




ಅನೇಕ ರಾಷ್ಟ್ರೀಯ ಪ್ರಶಸ್ತಿಗಳು ಮತ್ತು ಮಾನ್ಯತೆಗಳನ್ನು ವಿಜೇತ ಉತ್ಪನ್ನ

ಆರೋಗ್ಯಕರವಾದ ಸವಿಯನ್ನು ಆನಂದಿಸಿ

Along with HERBS

100% NATURAL

ARECA TEA

HEALTHY • TASTY • REFRESHING

ಕೊಲೆಸ್ಟರಾಲ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ

ಮಧುಮೇಹ ನಿರ್ವಹಣೆಯಲ್ಲಿ ಸಾಬೀತಾಗಿದೆ

ಇತರ ಚಹಾಗಳಿಗಿಂತ ಹೆಚ್ಚಿನ ಆ್ಯಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿದೆ

ಶಕ್ತಿಯನ್ನು ಹೆಚ್ಚಿಸುತ್ತದೆ

ಒತ್ತಡವನ್ನು ನಿವಾರಿಸುತ್ತದೆ

ದೀರ್ಘಕಾಲೀನ ಬಳಕೆಯಲ್ಲಿ ಸುರಕ್ಷಿತ





5 ರುಚಿಕರ ಸ್ವಾದಗಳಲ್ಲಿ ಲಭ್ಯ

(10ರ ಮತ್ತು 30ರ ಪ್ಯಾಕ್)

ಪುದೀನ ಶುಂಠಿ ರೆಗ್ಯುಲರ್ ನಿಂಬೆ ತುಳಸಿ





ಪ್ರಮೋಟರ್ಸ್: ಗ್ರೀನ್ ರೆಮೆಡೀಸ್, ಉಡುಪಿ

+91 820 252 9023

ಕಸ್ಟಮರ್ ಕೇರ್ ನಂ:

+91 80 2672 6337 / +91 63610 08174

ಇ ಮೇಲ್: arecatea@gmail.com

ಆನ್‌ಲೈನ್ ನಲ್ಲಿ ಖರೀದಿಸಿ

amazon | bigbasket India's largest online supermarket | Flipkart

www.arecatea.in ನಲ್ಲೂ ಲಭ್ಯ